## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಪ್ರಧಾನ ಮಂತ್ರಿಗಳ ಆವಾಸ್ ಯೋಜನೆ "ಹೌಸಿಂಗ್ ಫಾರ್ ಆಲ್–2022 (ನಗರ)" (PMAY-HFA) ಅಭಿಯಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ರಾಜ್ಯದಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

**ಓದಲಾಗಿದೆ:** ವಸತಿ ಮತ್ತು ನಗರ ಬಡತನ ನಿರ್ಮೂಲನ ಮಂತ್ರಾಲಯ, ಭಾರತ ಸರ್ಕಾರ ಒದಗಿಸಿದ "ಹೌಸಿಂಗ್ ಫಾರ್ ಆಲ್ –2022 (ನಗರ)" ಅಭಿಯಾನದ ಮಾರ್ಗಸೂಚಿಗಳು.

Directorate of Municipal Admn.
No.........
Compilation.........
27 JAN 2016
HOA/AD. Admn.........
DMA.........

**ಪ್ರಸ್ತಾವನೆ:**

ವಸತಿ ಮತ್ತು ನಗರ ಬಡತನ ನಿರ್ಮೂಲನ ಮಂತ್ರಾಲಯ, ಭಾರತ ಸರ್ಕಾರವು, ಕೊಳಚೆ ನಿವಾಸಿಗಳನ್ನೊಳಗೊಂಡಂತೆ, ನಗರದ ಬಡವರಿಗೆ ವಸತಿ ಒದಗಿಸುವ ಉದ್ದೇಶದೊಂದಿಗೆ ದಿನಾಂಕ: 25.06.2015 ರಂದು "ಹೌಸಿಂಗ್ ಫಾರ್ ಆಲ್" ಎಂಬ ನೂತನ ಅಭಿಯಾನವನ್ನು ಜಾರಿಗೊಳಿಸಿದೆ.

**ಈ ಅಭಿಯಾನದ ಸಂಕ್ಷಿಪ್ತ ಮಾಹಿತಿ ಈ ಕೆಳಕಂಡಂತಿದೆ:**

"ಹೌಸಿಂಗ್ ಫಾರ್ ಆಲ್" ಎಂಬ ನೂತನ ಅಭಿಯಾನದಡಿಯಲ್ಲಿ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ಎಲ್ಲಾ ಅರ್ಹ ಫಲಾನುಭವಿ ಕುಟುಂಬಗಳಿಗೆ ಮನೆಗಳನ್ನು (ಮೂಲಭೂತ ಸೌಕರ್ಯಗಳೊಂದಿಗೆ 30 ಚದರ ಮೀಟರ್ ಕಾರ್ಪೆಟ್ ಪ್ರದೇಶವಿರುವ ಮನೆಗಳನ್ನು) ನಿರ್ಮಿಸಲು 2015–2022 ರ ಅವಧಿಯಲ್ಲಿ ಕೇಂದ್ರ ಸರ್ಕಾರವು ಆರ್ಥಿಕ ನೆರವು ಒದಗಿಸುವುದು.

ಫಲಾನುಭವಿ ಕುಟುಂಬ ಎಂದರೆ ಪತಿ, ಪತ್ನಿ, ಅವಿವಾಹಿತ ಗಂಡು ಮಕ್ಕಳು ಮತ್ತು ಅವಿವಾಹಿತ ಹೆಣ್ಣು ಮಕ್ಕಳು ಇವರನ್ನು ಒಳಗೊಂಡಂತೆ ಯಾವುದೇ ಸ್ಥಳದಲ್ಲಿ ಅವನ / ಅವಳ ಹೆಸರಿನಲ್ಲಿ ಅಥವಾ ಅವನ / ಅವಳ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಒಂದಾದರೂ ಸ್ವಂತ ಪಕ್ಕಾ ಮನೆ ಇರಕೂಡದು.

ರಾಜೀವ್ ಆವಾಸ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡ ಯೋಜನೆಗಳನ್ನು ಈ ಅಭಿಯಾನದಡಿಯಲ್ಲಿ ವಿಲೀನಗೊಳಿಸಲಾಗುವುದು.

**1. ಅನುಷ್ಠಾನ ವಿಧಾನ.**

ಈ ಕೆಳಗಿನ ನಾಲ್ಕು Verticals ಮೂಲಕ ಈ ಅಭಿಯಾನವನ್ನು ಅನುಷ್ಠಾನಗೊಳಿಸಬಹುದಾಗಿದೆ.

1. ಭೂಮಿಯನ್ನು ಸಂಪನ್ಮೂಲವನ್ನಾಗಿಸಿಕೊಂಡು "In-situ" ಮಾದರಿಯಲ್ಲಿ ಕೊಳಚೆ ಪ್ರದೇಶಗಳ ಪುನರಾಭಿವೃದ್ಧಿ.
2. ಕ್ರೆಡಿಟ್ ಲಿಂಕ್ ಸಹಾಯಧನ ಯೋಜನೆ.
3. ಅಫೋರ್ಡೆಬಲ್ ಹೌಸಿಂಗ್ ಇನ್ ಪಾರ್ಟನರ್‌ಶಿಫ್ (AHP).
4. ಫಲಾನುಭವಿ ನೇತೃತ್ವದ ಪ್ರತ್ಯೇಕ ಮನೆ ನಿಮಾಣ ಅಥವಾ ವರ್ಧನೆ.

--2

ಕೊಳಚೆ ನಿವಾಸಿಗಳನ್ನೊಳಗೊಂಡಂತೆ, ನಗರದ ಬಡವರಿಗೆ ವಸತಿ ಒದಗಿಸುವ ಉದ್ದೇಶದೊಂದಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ "ಹೌಸಿಂಗ್ ಫಾರ್ ಆಲ್" ಎಂಬ ನೂತನ ಅಭಿಯಾನವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ರಾಜ್ಯದಲ್ಲಿ ಸಮಗ್ರವಾಗಿ ಹಾಗೂ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಅನುಮೋದನೆ ನೀಡಿ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ನಅಇ 145 ಸಿಎಸ್ಎಸ್ 2015, ಬೆಂಗಳೂರು, ದಿನಾಂಕ:18-01-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೇಂದ್ರ ಪುರಸ್ಕೃತ "ಹೌಸಿಂಗ್ ಫಾರ್ ಆಲ್" ಯೋಜನೆಯನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ರಾಜ್ಯದಲ್ಲಿ ಜಾರಿಗೆತಂದು ಅನುಬಂಧದಲ್ಲಿ ತಿಳಿಸಿರುವ ರಾಜ್ಯದ 214 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳಿಸಲು ಹಾಗೂ ಕೇಂದ್ರ ಸರ್ಕಾರದೊಂದಿಗೆ ಒಪ್ಪಂದ ಪತ್ರಕ್ಕೆ (MoA) ಸಹಿ ಹಾಕಲು ಸರ್ಕಾರದ ಅನುಮೋದನೆ ನೀಡಲಾಗಿದೆ.

**ಕಡ್ಡಾಯ ನಿಯಮಗಳು:-**

ಈ ಅಭಿಯಾನದಡಿಯಲ್ಲಿ ಭಾಗವಹಿಸಲು ಮತ್ತು ಕೇಂದ್ರ ಸರ್ಕಾರದ ಆರ್ಥಿಕ ನೆರವು ಪಡೆಯಲು ರಾಜ್ಯ ಸರ್ಕಾರವು, ಈ ಕೆಳಗಿನ ಕಡ್ಡಾಯ ನಿಯಮಗಳನ್ನು ಅನುಷ್ಠಾನಗೊಳಿಸಲು ಅನುಮತಿ ನೀಡಲಾಗಿದೆ.

| ಕ್ರಸಂ | ಕಡ್ಡಾಯ ನಿಯಮಗಳು | ಜವಾಬ್ದಾರಿ ವಹಿಸಿದ ಇಲಾಖೆಗಳು |
|---|---|---|
| 1 | ಈಗಾಗಲೇ ನಗರದ / ಪ್ರದೇಶದ ಮಾಸ್ಟರ್ ಪ್ಲಾನ್ ನಲ್ಲಿ ಮೀಸಲಿಡಲಾದ ನಿವಾಸ ವಲಯ (Residential Zone) ಗಳಲ್ಲಿ ಕೃಷಿ ಭೂಮಿ ಇದ್ದಲ್ಲಿ, ರಾಜ್ಯ ಸರ್ಕಾರವು ಪ್ರತ್ಯೇಕ Non Agricultural (NA) Permission ನೀಡುವ ಅವಶ್ಯಕತೆಯನ್ನು ತಪ್ಪಿಸಲು, ವಿಧಾನ ಮತ್ತು ನಿಯಮಗಳಲ್ಲಿ ಸೂಕ್ತವಾದ ಬದಲಾವಣೆ ತರಬೇಕು. | ಕಂದಾಯ ಇಲಾಖೆ |
| 2 | ರಾಜ್ಯ ಸರ್ಕಾರವು ಕೈಗೆಟುಕುವ ದರದಲ್ಲಿ ವಸತಿ ನಿರ್ಮಿಸುವ ಉದ್ದೇಶಕ್ಕಾಗಿ ಭೂಮಿಯನ್ನು ಮೀಸಲಿರಿಸಲು ಮಾಸ್ಟರ್ ಪ್ಲಾನ್ ಸಿದ್ಧಪಡಿಸಬೇಕು / ತಿದ್ದಪಡಿ ತರಬೇಕು. | ನಗರ ಹಾಗೂ ಗ್ರಾಮಾಂತರ ಯೋಜನಾ ಇಲಾಖೆ (ನಗರಾಭಿವೃದ್ಧಿ ಇಲಾಖೆ) /ಕಂದಾಯ ಇಲಾಖೆ |
| 3 | ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ಲೇಔಟ್ ಅನುಮೋದನೆ ಮತ್ತು ಕಟ್ಟಡ ಅನುಮತಿ (building plan) ಗಳನ್ನು ನಿಗದಿತ ಸಮಯದೊಳಗೆ ಒದಗಿಸಲು ಒಂದು ಏಕ ಗವಾಕ್ಷಿ ವ್ಯವಸ್ಥೆಯನ್ನು ಸ್ಥಾಪಿಸಬೇಕು. | ನಗರಾಭಿವೃದ್ಧಿ ಇಲಾಖೆ |
| 4 | EWS/LIG ವಸತಿ ನಿರ್ಮಿಸಲು pre-approved lay outs and building plans ಆದಾರದ ಮೇಲೆ ರಾಜ್ಯಗಳು deemed building permission and layout approvals ಒದಗಿಸುವುದನ್ನು ಪರಿಗಣಿಸಬೇಕು. ನಿರ್ದಿಷ್ಟ ಬಿಲ್ಟ್ ಆಫ್ ಏರಿಯಾಗಿಂತ ಕಡಿಮೆ ಇರುವ EWS / LIG ವಸತಿ ನಿರ್ಮಿಸಲು ಲೇಔಟ್ ಅನುಮೋದನೆ ಪಡೆಯುವುದಕ್ಕೆ ವಿನಾಯಿತಿ ನೀಡಬೇಕು. | ನಗರಾಭಿವೃದ್ಧಿ ಇಲಾಖೆ |
| 5 | ಸಚಿವಾಲಯ ಸಿದ್ಧಪಡಿಸುತ್ತಿರುವ "Model Tenancy Act" ಅನುಸಾರವಾಗಿ ಪ್ರಸ್ತುತ ಜಾರಿಯಲ್ಲಿರುವ "Rental Law" ಗಳನ್ನು ಸರ್ಕಾರವು ತಿದ್ದುಪಡಿ ತರುಬೇಕು. | ಕಂದಾಯ ಇಲಾಖೆ |
| 6 | ರಾಜ್ಯ ಸರ್ಕಾರವು, ಬೇಕಾದಲ್ಲಿ ಹೆಚ್ಚುವರಿ FAR / FSI / TDR ಒದಗಿಸಬೇಕು. ಅಗತ್ಯವಿದ್ದಲ್ಲಿ ಕೊಳಚೆ ಪ್ರದೇಶಗಳ ಪುನರಾಭಿವೃದ್ಧಿಗಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಮನೆ ನಿರ್ಮಿಸಲು ಅನುವಾಗುವಂತೆ ಸಾಂದ್ರತೆ ನಿಯಮಗಳಿಗೆ ಕೂಡ ವಿನಾಯಿತಿಗಳನ್ನು ನೀಡಬೇಕು. | ನಗರ ಹಾಗೂ ಗ್ರಾಮಾಂತರ ಯೋಜನಾ ಇಲಾಖೆ (ನಗರಾಭಿವೃದ್ಧಿ ಇಲಾಖೆ) |

--3